ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಡೀನ್ ರವರ ಕಛೇರಿ

ಪಶುವೈದ್ಯಕೀಯ ಮಹಾವಿದ್ಯಾಲಯ

ಗೋಕುಲ, ವಿದ್ಯಾನಗರ ಅಂಚೆ

ಹಾಸನ-573 202

ಇಮೇಲ: deanhvc@gmail.com ದೂರವಾಣಿ: ಫ್ಯಾಕ್ಸ: 08172- 245373

ಸಂಖ್ಯೆ: ಡೀನ್/ಹಾಪಮ/ಬೋಧಕ(ಗುತ್ತಿಗೆ ಆಧಾರ) ನೇಮಕಾತಿ/2023/170 ದಿನಾಂಕ: 02.06.2023

## ಅಧಿಸೂಚನೆ

**ವಿಷಯ:** ಉಳಿದ ಬೋಧಕ ಸಿಬ್ಬಂದಿ (ಗುತ್ತಿಗೆ ಆಧಾರ) ಹುದ್ದೆಗಳ ನೇಮಕಾತಿ ಕುರಿತು.

**ಉಲ್ಲೇಖ:** 1. ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: No.R/HVC/CT/2023-24, Dtd: 12.04.2023,
2. ಬೋಧಕ ಸಿಬ್ಬಂದಿ (ಗುತ್ತಿಗೆ ಆಧಾರ) ಹುದ್ದೆಗಳಿಗೆ ನಡೆದ ಸಂದರ್ಶನ ದಿನಾಂಕ: 29.05.2023

*******

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಉಲ್ಲೇಖದಂತೆ ನಡೆದ ನೇಮಕಾತಿ ಸಂದರ್ಶನದಲ್ಲಿ ಭರ್ತಿಯಾಗದ ಕೆಳಗೆ ನಮೂದಿಸಿದಂತೆ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಖಾಲಿ ಇರುವ ಹುದ್ದೆಗಳ ಎದುರಾಗಿ ಬೋಧಕ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರಮ.ಸಂಖ್ಯೆ | ಹುದ್ದೆ ಮತ್ತು ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 01 | ಪ್ರಾಣಿ ಅನುವಂಶೀಯತೆ ಮತ್ತು ತಳಿಶಾಸ್ತ್ರ ವಿಭಾಗ | 01 |
| 02 | ಪಶುವೈದ್ಯಕೀಯ ಶಸ್ತ್ರಚಿಕಿತ್ಸೆ ಮತ್ತು ಕ್ಷ-ಕಿರಣ ವಿಭಾಗ | 02 |
| 02 | ಪಶು ಜಾನುವಾರು ಸಾಕಾಣಿಕ ಸಂಕೀರ್ಣ ವಿಭಾಗ (AGB/Poultry Science/ LPM) | 01 |
| 03 | ಪಶುವೈದ್ಯಕೀಯ ಅಂಗರಚನಾಶಾಸ್ತ್ರ ವಿಬಾಗ | 01 |
| | **ಒಟ್ಟು** | **05** |

ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸ್ವ-ವಿವರವನ್ನು ಭರ್ತಿಮಾಡಿ ನಿಗದಿಯಾದ ಸಂದರ್ಶನದ ದಿನಾಂಕ: 09.06.2023 ರಂದು ಬೆಳಗ್ಗೆ 10.00 ಘಂಟೆಗೆ ಸಲ್ಲಿಸಬೇಕು.

1. ಅಭ್ಯರ್ಥಿಯು ಸಂಪೂರ್ಣ ಭರ್ತಿ ಮಾಡಿದ ಅರ್ಜಿಯೊಂದಿಗೆ ದಿನಾಂಕ: 09.06.2023 ರ ಬೆಳಗ್ಗೆ 10.00 ಘಂಟೆಗೆ , ಹಾಸನದ ಪಶುವೈದ್ಯಕೀಯ ಕಾಲೇಜಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.
2. ಅರ್ಜಿಯನ್ನು ಸಂದರ್ಶನದ ಸಮಯದಲ್ಲಿ ಮಾತ್ರ ಸಲ್ಲಿಸಬೇಕು ಅರ್ಜಿಯನ್ನು ಮುಂಚಿತವಾಗಿ ಅಥವಾ ಮಿಂಚಂಚೆ ಮುಖಾಂತರವಾಗಲಿ ಕಳುಹಿಸುವಂತಿಲ್ಲ.
3. ಸಹಾಯಕ ಪ್ರಾಧ್ಯಾಪಕರ ಹುದ್ದೆಯು ಪ್ರಸ್ತುತ ಖಾಲಿ ಇರುವ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯಾಗಿದ್ದು ಇದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಲ್ಲಿ ಖಾಯಮಾತಿ, ಹಿರಿತನ, ಸಕ್ರಮಾತಿ ಮತ್ತು ಇತರೆ ಯಾವುದೇ ತರಹದ ಹಕ್ಕಿಗೆ ಒಳಪಟ್ಟಿರುವುದಿಲ್ಲ.
4. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ಕಡ್ಡಾಯವಾಗಿ ಪದವಿಗಳ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳು, ರಾಷ್ಟ್ರೀಯ ಅರ್ಹತಾ ಪರೀಕ್ಷೆ ಉತ್ತೀರ್ಣರಾದ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ಪ್ರಕಟಿತ ಲೇಖನಗಳು, ಪ್ರಶಸ್ತಿಗಳು ಮತ್ತು ಇತರೆ ಎಲ್ಲಾ ಮೂಲ ದಾಖಲೆಗಳನ್ನು ಸಂದರ್ಶನದ ಸಮಯದಲ್ಲಿ ಸಮಿತಿಯ ಮುಂದೆ ಹಾಜರುಪಡಿಸಬೇಕು.
5. ಸಂದರ್ಶಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ನೀಡಲಾಗುವುದಿಲ್ಲ.

6. ಸಂಬಂಧಪಟ್ಟ ವಿಷಯದಲ್ಲಿ ಭಾರತೀಯ ಪಶುವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಹೊಂದಿರುವ ಮಹಾವಿದ್ಯಾಲಯಗಳಿಂದ ಪಶುವೈದ್ಯಕೀಯ ಅಥವಾ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಡಿಯಲ್ಲಿ ಬರುವ deemed institutions ಗಳಿಂದ ಪದವಿ ಪಡೆದಿರಬೇಕು
7. ನೇಮಕಾತಿಯ ಅವಧಿಯು ಗರಿಷ್ಠ 179 ದಿನಗಳವರೆಗೆ ಅಥವಾ ಸದರಿ ಹುದ್ದೆ ಖಾಯಂ ಅಭ್ಯರ್ಥಿಯಿಂದ ಭರ್ತಿ ಆಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.
8. ನೇಮಕಾತಿಯು ತಾತ್ಕಾಲಿಕವಾಗಿದ್ದು, ಯಾವುದೇ ಸಮಯದಲ್ಲಿ ಯಾವುದೇ ಮಾಹಿತಿ ಮತ್ತು ಕಾರಣ ನೀಡದೆ ತೆಗೆದು ಹಾಕಲಾಗುವುದು ಅಥವಾ ಆದೇಶವನ್ನು ರದ್ದು ಪಡಿಸಲಾಗುವುದು
9. ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಯಲ್ಲಿ ಉತ್ತೀರ್ಣರಾದವರಿಗೆ ಆದ್ಯತೆ
10. ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳಲ್ಲಿ ಕನ್ನಡ ಓದಲು, ಮಾತನಾಡಲು ಮತ್ತು ಬರೆಯಲು ಬರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು
11. ಆಯ್ಕೆಯಾದ ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ ಮಾಸಿಕ ರೂ. 56,700/– ಮತ್ತು ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಪ್ರಮಾಣ ಪತ್ರ ಹೊಂದಿರದ ಅಭ್ಯರ್ಥಿಗಳಿಗೆ ಮಾಸಿಕ ರೂ. 50,000/–ವೇತನವಾಗಿ ಪಾತಿಸಲಾಗುವುದು

02/06

ಡೀನ್
ಪಶುವೈದ್ಯಕೀಯ ಕಾಲೇಜು
ಹಾಸನ.

ಪ್ರತಿಯನ್ನು ಆದರ ಪೂರ್ವಕವಾಗಿ ಸಲ್ಲಿಸಲಾಗಿದೆ:

1. ಮಾನ್ಯ ಕುಲಸಚಿವರು, ಕಪಪಮೀವಿವಿ, ಬೀದರ ಇವರ ಮಾಹಿತಿಗಾಗಿ.
2. ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಬೀದರ/ಶಿವಮೊಗ್ಗ/ ಗದಗ / ಚನ್ನೈ/ ತಿರುಪತಿ ಮಾಹಿತಿಗಾಗಿ.
3. ವಿಶ್ವವಿದ್ಯಾಲಯದ ಗ್ರಂಥಪಾಲಕರು, ಕಪಪಮೀವಿವಿ, ಬೀದರ ರವರಿಗೆ ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.

ಪ್ರತಿ:

1. ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರುಗಳು ವ್ಯಾಪಕ ಪ್ರಚಾರ ನೀಡುವಂತೆ ಮನವಿಗಾಗಿ.
2. ಹಿರಿಯ ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಛೇರಿ ರವರಿಗೆ ಸದರಿ ಮಾಹಿತಿಯನ್ನು ಮಾನ್ಯ ಕುಲಪತಿಗಳು, ಕಪಪಮೀವಿವಿ, ಬೀದರ ರವರ ಗಮನಕ್ಕೆ ತರಲು ಕೋರಲಾಗಿದೆ.
3. ಮಹಾವಿದ್ಯಾಲಯದ ಸೂಚನಾ ಫಲಕ/ ಕಛೇರಿ ಕಡತ